## ಕರ್ನಾಟಕ ಲೋಕಾಯುಕ್ತ

29

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.6916/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 3.2.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಮಧುಗಿರಿ ತಾಲ್ಲೂಕು ಕೊಡಿಗೇನಹಳ್ಳಿ ಗ್ರಾಮದ ಸರ್ವೆ ನಂ.124/6ರಲ್ಲಿ ನಿವೇಶನ ಸಂ.7 ಮತ್ತು 8 ರ ಖಾತೆಯನ್ನು ದೂರುದಾರರ ಹೆಂಡತಿಯ ಹೆಸರಿನಿಂದ ಗಣಕ ಯಂತ್ರ ತಂತ್ರಾಂಶದಲ್ಲಿ ಅಳವಡಿಸುವಾಗ ಬೇರೆ ಹೆಸರಿನಲ್ಲಿ ಬದಲಾಯಿಸಿರುವುದನ್ನು ಪುನ: ದೂರುದಾರರ ಹೆಂಡತಿಯ ಹೆಸರಿನಲ್ಲಿ ನಿಯಮಾನುಸಾರ ದಾಖಲೆಗಳನ್ನು ಪಡೆದು ಖಾತೆ ಬದಲಾವಣೆ ಮಾಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಬಗ್ಗೆ.

*******

ಶ್ರೀ ಹನುಮಂತರಾಯಪ್ಪ ಬಿ.ಎಸ್., ಕೊಡಿಗೆನಹಳ್ಳಿ ಗ್ರಾಮದ ನಿವಾಸಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಹೆಚ್.ವಿ.ಶಿವರುದ್ರಯ್ಯ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೊಡಿಗೆನಹಳ್ಳಿ ಗ್ರಾಮಪಂಚಾಯತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ,(ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಮಧುಗಿರಿ ತಾಲ್ಲೂಕು ಕೊಡಿಗೇನಹಳ್ಳಿ ಗ್ರಾಮದ ಸರ್ವೆ ನಂ.124/6ರಲ್ಲಿ ನಿವೇಶನ ಸಂ.7 ಮತ್ತು 8 ದೂರುದಾರರ ಹೆಂಡತಿ ಶ್ರೀಮತಿ ಮಾಲತಿ.ಎಸ್. ಗಂಡ ಹೆಚ್. ರಾಯಪ್ಪ ಎಂಬುವವರ ಹೆಸರಿನಲ್ಲಿ ಖಾತೆಯಾಗಿದ್ದು, ಎದುರುದಾರರು ಡಿ.ಸಿ.ಬಿ.ರಿಜಿಸ್ಟರ್ ಮತ್ತು ಗಣಕಯಂತ್ರದಲ್ಲಿ ಈ ಖಾತೆಯನ್ನು ಮಾಲತಿ ಗಂಡ ರಾಮಪ್ಪ ಅಂತ ಸೃಷ್ಟಿಸಿದ್ದು ಇರುತ್ತದೆ. ಪಡಿತರ ಚೀಟಿಗಾಗಿ ತಾವು ಅರ್ಜಿ ಸಲ್ಲಿಸಿದಾಗ ಸದರಿ ಅರ್ಜಿಯು ತಿರಸ್ಕೃತಗೊಂಡಿದ್ದು, ಈ ಬಗ್ಗೆ ಎದುರುದಾರರನ್ನು ವಿಚಾರಿಸಿದಾಗ ಕೈತಪ್ಪಿನಿಂದ ಆಗಿದ್ದು, ಸರಿಪಡಿಸಲು ದಾಖಲೆಗಳ ಅವಶ್ಯವಿದೆಯೆಂದು ದಾಖಲೆಗಳನ್ನು ಪಡೆದಿರುತ್ತಾರೆ. ಆದರೆ ಇದುವರೆಗೆ ಖಾತೆ ಬದಲಾವಣೆ

ಮಾಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಎಸ್.ಮಾಲತಿ ಗಂಡ ರಾಯಪ್ಪ ಎಂಬುವವರ ಹೆಸರಿನಲ್ಲಿ ಇರುವ ಖಾತೆಯನ್ನು 2010ರಲ್ಲಿ ಪಂಚತಂತ್ರ ತಂತ್ರಾಂಶವನ್ನು ಇಲಾಖೆಯಿಂದ ಜಾರಿಗೆ ತಂದಿದ್ದು, ಸದರಿ ತಂತ್ರಾಂಶಕ್ಕೆ ಗ್ರಾಮಪಂಚಾಯತಿಯಲ್ಲಿರುವ ಎಲ್ಲಾ ಆಸ್ತಿಗಳ ವಿವರಗಳನ್ನು ದಾಖಲಿಸಬೇಕಾದ ಸಂದರ್ಭದಲ್ಲಿ ಗಣಕಯಂತ್ರ ನಿರ್ವಾಹಕರು ಕೈತಪ್ಪಿನಿಂದ ಎಸ್.ಮಾಲತಿ ಗಂಡ ರಾಯಪ್ಪ ಬದಲಾಗಿ ಎಸ್.ಮಾಲತಿ ಗಂಡ ರಾಮಪ್ಪ ಎಂದು ತಪ್ಪಾಗಿ ನಮೂದಿಸಿರುತ್ತಾರೆ. ಆದ್ದರಿಂದ ಇದರಲ್ಲಿ ಯಾವುದೇ ಖೊಟ್ಟಿಯಾಗಲೀ ಅಥವಾ ಅಕ್ರಮವಾಗಲೀ ಜರುಗಿರುವುದಿಲ್ಲ. ದಿ.14.6.2013ರಿಂದ ಇ–ಸ್ವತ್ತು ತಂತ್ರಾಂಶವನ್ನು ಜಾರಿಗೆ ತಂದಿದ್ದು, ಹೆಸರನ್ನು ಬದಲಾಯಿಸುವುದನ್ನು ರದ್ದುಪಡಿಸಲಾಗಿರುತ್ತದೆ. ಇ–ತಂತ್ರಾಂಶದಲ್ಲಿ ಹೆಸರು ಬದಲಿಸಬೇಕಾದರೆ ಕ್ರಯಪತ್ರವಾದ ನಂತರ ಪ್ರಾಧಿಕಾರದ ನಕ್ಷೆ ಅನುಮೋದನೆಗೊಂಡ ಆದೇಶವನ್ನು ಅಳವಡಿಸಬೇಕಾಗುತ್ತದೆ. ಇದಕ್ಕೆ ಡಿಜಿಟಲ್ ಸಹಿ ಮಾಡಬೇಕಾಗಿದ್ದು ಡ್ಯಾಂಗಲ್ ಅವಶ್ಯಕತೆಯಿದ್ದು, ಆದರೆ ಆ ಸಮಯದಲ್ಲಿ ಎದುರುದಾರರ ಡ್ಯಾಂಗಲ್ ರಿನೀವಲ್‌ಗೆ ಕಳುಹಿಸಲಾಗಿರುತ್ತದೆ. ಆನಂತರ ಎದುರುದಾರರು ಅಲ್ಲಿಂದ ವರ್ಗಾವಣೆ ಹೊಂದಿದ್ದ ಕಾರಣ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರು ತಮ್ಮದಲ್ಲದ ತಪ್ಪಿಗೆ ಪರಿತಪಿಸುವಂತಾಗಿದ್ದು ಕಂಡುಬರುತ್ತದೆ. ಏಕೆಂದರೆ ಎದುರುದಾರರ ಕಛೇರಿಯಲ್ಲಿ ತಂತ್ರಾಂಶದಲ್ಲಿ ಹೆಸರು ದಾಖಲಿಸುವಾಗ ಈ ರೀತಿ ತಪ್ಪಾಗಿದ್ದು, ಅದನ್ನು ಸರಿಪಡಿಸಿಕೊಡುವ ಕರ್ತವ್ಯ ಎದುರುದಾರರದ್ದಾಗಿರುತ್ತದೆ. ದೂರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಖಾತೆ ನಂ.1280 ಇದು 2008–09ರಲ್ಲಿ ಮಾಲತಿ ಗಂಡ ರಾಯಪ್ಪ ಅಂತ ಇದ್ದು, ಆನಂತರ ಅದು ಮಾಲತಿ ಗಂಡ ರಾಮಪ್ಪ ಎಂದು ಬದಲಾವಣೆಯಾಗಿರುವುದು ಕಂಡುಬರುತ್ತದೆ.

6. ಎದುರುದಾರರು ಕೇಳಿರುವ ದಾಖಲೆಗಳನ್ನು ದೂರುದಾರರು ನೀಡಿದರೂ ಸಹಾ ಬೇರೆಬೇರೆ ತಾಂತ್ರಿಕ ಕಾರಣಗಳನ್ನು ನೀಡಿ ದೂರುದಾರರಿಗೆ ನ್ಯಾಯದೊರಕದಿರುವುದು ಕಂಡುಬರುತ್ತದೆ. ಎದುರುದಾರರು ಈ ರೀತಿ ದಾಖಲೆಗಳಲ್ಲಿ ತಪ್ಪು ಕಂಡುಬಂದ ನಂತರವೂ ಅದೇ ಪಂಚಾಯತಿಯಲ್ಲಿ ಕೆಲಸ ನಿರ್ವಹಿಸಿದ್ದು, ಆದರೆ ದೂರುದಾರರ ಸಮಸ್ಯೆಯನ್ನು ಪರಿಹರಿಸದಿರುವುದು ಕಂಡುಬರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೂರುದಾರರ ಹೆಂಡತಿಯ ಹೆಸರಿನಲ್ಲಿರುವ ಖಾತೆಯನ್ನು ಗಣಕ ಯಂತ್ರ ತಂತ್ರಾಂಶದಲ್ಲಿ ಅಳವಡಿಸುವಾಗ ಬೇರೆ ಹೆಸರಿನಲ್ಲಿ ಬದಲಾಯಿಸಿರುವುದನ್ನು ಪುನ: ದೂರುದಾರರ ಹೆಂಡತಿಯ ಹೆಸರಿನಲ್ಲಿ ನಿಯಮಾನುಸಾರ ದಾಖಲೆಗಳನ್ನು ಪಡೆದು ಖಾತೆ ಬದಲಾವಣೆ ಮಾಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಸಕ್ಷಮ ಪ್ರಾಧಿಕಾರವನ್ನು ಕೋರಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

Sd/- 2/2/17.

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.